ಇಲಾಖೆ / ವಿಷಯ: DEPARTMENT / SUBJECT: ಸಾಮಾನ್ಯ ಸಭಾಧ್ಯಕ್ಷರು

ಪತ್ರಿಕೆಯ ಹೆಸರು : NAME OF THE NEWS PAPER : ಸಂಯುಕ್ತ ಕರ್ನಾಟಕ   ದಿನಾಂಕ : DATE : 29/07/2019

# ಸಭಾಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ

29-7-19

ಸಂ.ಕ ಸಮಾಚಾರ ಬೆಂಗಳೂರು

ಸಭಾಧ್ಯಕ್ಷ ರಮೇಶಕುಮಾರ್ ವಿರುದ್ಧ ಅವಿಶ್ವಾಸ ಮಂಡನೆ ಮಾಡುವ ಬಗ್ಗೆ ಬಿಜೆಪಿಯಲ್ಲಿ ಚರ್ಚೆ ಆರಂಭಗೊಂಡಿವೆ. ಆದರೆ, ಈ ಬಗ್ಗೆ ಬಿಜೆಪಿ ಮುಖಂಡರು ಸ್ಪಷ್ಟ ನಿರ್ಧಾರಕ್ಕೆ ಬಂದಿಲ್ಲ. ಹದಿನೇಳು ಶಾಸಕರ ಅನರ್ಹತೆಯೂ ಸೇರಿದಂತೆ ಒಟ್ಟಾರೆ ವಿದ್ಯಮಾನವು ಬಿಜೆಪಿಗೆ ಇರುಸು-ಮುರುಸು ತಂದಿದೆ. ಬದಲಾದ ರಾಜಕೀಯ ಸನ್ನಿವೇಶದಲ್ಲಿ ಬಿಜೆಪಿ ಅಧಿಕಾರದ ಚುಕ್ಕಾಣಿ ಹಿಡಿದಿರುವ ಹಿನ್ನೆಲೆಯಲ್ಲಿ ತಮ್ಮದೇ ಪಕ್ಷದ ಸಭಾಧ್ಯಕ್ಷರನ್ನು ಆಯ್ಕೆ ಮಾಡುವ ಇರಾದೆಯೂ ಮುಖಂಡರದ್ದು.

ಬಿಜೆಪಿಯು ತಮ್ಮ ವಿರುದ್ಧ ಅವಿಶ್ವಾಸ ಮಂಡನೆ ಮಾಡಲಿದೆ ಎಂಬಂಶವನ್ನು ಪರಿಗಣಿಸಿಯೇ ಸಭಾಧ್ಯಕ್ಷ ರಮೇಶಕುಮಾರ್ ಭಾನುವಾರದ ಪತ್ರಿಕಾಗೋಷ್ಠಿಯಲ್ಲಿ ಸೋಮವಾರ ಸದನದಲ್ಲಿ ಅಚ್ಚರಿಯ ನಿರ್ಧಾರ ಪ್ರಕಟಿಸಲಿದ್ದೇನೆ ಎಂಬ ಮಾತು ಹೇಳಿದ್ದಾರೆ ಎಂದು ಹೇಳಲಾಗುತ್ತಿದೆ.

1